ಚೈನಾ ಪ್ರವಾಸಕ್ಕೆ ಪ್ರತಿಯೊಬ್ಬ ರೈತನಿಗೆ ತಗಲುವ ವೆಚ್ಚ ರೂ.67950/– ಗಳಾಗಿರುತ್ತದೆ.

ಈ ರೈತರಿಗೆ ಪ್ರವಾಸದಲ್ಲಿ ಪ್ರಯಾಣ, ವಸತಿ ಮತ್ತು ಊಟದ ಸೌಲಭ್ಯಗಳನ್ನು ಒದಗಿಸಲಾಗುವುದು.

ಇ) ಯಾವಾಗ, ಈ ರೈತರನ್ನು ಚೈನಾ ಪ್ರವಾಸಕ್ಕೆ ಕಳುಹಿಸಕೊಡಲಾಗುವುದು?

ರೈತರನ್ನು ಚೈನಾ ಪ್ರವಾಸಕ್ಕೆ ಡಿಸೆಂಬರ್ 2008 ರಿಂದ ಕಳುಹಿಸಿಕೊಡಲಾಗುತ್ತಿದೆ.

ಕೃತೋಇ/45/ಕೃಉಇ/2009

ಕರ್ನಾಟಕ ವಿಧಾನ ಸಭೆ

136 ಶ್ರೀ ಬಾಲಕೃಷ್ಣ ಹೆಚ್.ಸಿ

ಅ) ಬೆಂಗಳೂರು ನಗರದ ಮೈಸೂರು ರಸ್ತೆಯ ಬಾಪೂಜಿ ಗೃಹ ನಿರ್ಮಾಣ ಸಹಕಾರ ಸಂಘದಲ್ಲಿ ನಡೆದಿರುವ ಅವ್ಯವಹಾರಗಳು ಸರ್ಕಾರದ ಗಮನಕ್ಕೆ ಬಂದಿದೆಯೇ? ಹಾಗಿದ್ದಲ್ಲಿ, ಈ ಅವ್ಯವಹಾರ ಸ್ವರೂಪವನ್ನು ತಿಳಿಸುವುದು.

ಈ ಸಹಕಾರ ಸಂಘದಲ್ಲಿ ಕೆಳಕಂಡ ಅವ್ಯವಹಾರಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿರುತ್ತದೆ.

1. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 65ರಡಿಯಲ್ಲಿ ನಡೆಸಿದ ಪರಿವೀಕ್ಷಣೆಯಲ್ಲಿ ಸಂಘದ ಆಗಿನ ಅಧ್ಯಕ್ಷರಾದ ಶ್ರೀ ಡಿ.ರಾಜಕುಮಾರ್ ಹಾಗೂ ಉಪಾಧ್ಯಕ್ಷರಾಗಿದ್ದ ಶ್ರೀ ಎಂ.ವಿ.ರುದ್ರಾಚಾರಿ ಹಾಗೂ ಇತರೆ ಆಡಳಿತ ಮಂಡಳಿ ಸದಸ್ಯರುಗಳ ರೂ.459.69ಲಕ್ಷಗಳನ್ನು ದುರುಪಯೋಗಪಡಿಸಿಕೊಂಡಿರುವುದು.

2. ಸಂಘದ 1998–99 ಮತ್ತು 1999–2000ನೇ ಸಾಲಿನ ಲೆಕ್ಕಪರಿಶೋಧನಾ ವರದಿಯಲ್ಲಿ ಸಂಘದ ಆಗಿನ ಪದಾಧಿಕಾರಿಗಳು ಹಾಗೂ ಆಡಳಿತ ಮಂಡಳಿ ಸದಸ್ಯರುಗಳು ರೂ.1,90,14,213/– ಗಳ ಹಣ ದುರುಪಯೋಗಪಡಿಸಿಕೊಂಡಿರುವುದು.

3. ಹಿರಿಯ ಸದಸ್ಯರುಗಳ ಜೇಷ್ಠತೆಯನ್ನು ಕಡೆಗಣಿಸಿ ಕಿರಿಯ ಸದಸ್ಯರಿಗೆ ನಿವೇಶನಗಳನ್ನು ಹಂಚಿರುವುದು.

4. ಸಂಘದ ಆಗಿನ ಅಧ್ಯಕ್ಷರಾದಂತಹ ಶ್ರೀ ಡಿ.ರಾಜ್‌ಕುಮಾರ್‌ರವರು ಕೆಂಗೇರಿ ಗ್ರಾಮಕ್ಕೆ ಸೇರಿದ ಸಂಘದ ಹೆಸರಿಗೆ ಜಿ.ಪಿ.ಎ. ಆಗಿರುವ 3.07 ಜಮೀನನ್ನು ಅಕ್ರಮವಾಗಿ ಮಾರಾಟ ಮಾಡಿ ಅವ್ಯವಹಾರ ಮಾಡಿರುವುದು.

ಆ) ಈಗಾಗಲೇ ಹಿಂದಿನ ವಿಧಾನ ಸಭಾ ಅಧಿವೇಶನದಲ್ಲಿ ಈ ಸಂಘದ ಅವ್ಯವಹಾರದ ಬಗ್ಗೆ 3 ತಿಂಗಳಲ್ಲಿ ತನಿಖೆ ನಡೆಸುವುದಾಗಿ ಹಿಂದಿನ ಸರ್ಕಾರ ತಿಳಿಸಿರುವುದು ನಿಜವೇ?

ಹಿಂದಿನ ವಿಧಾನ ಸಭಾ ಅಧಿವೇಶನದಲ್ಲಿ ಮಾನ್ಯ ಸಹಕಾರ ಸಚಿವರು ಸದನದಲ್ಲಿ ಉತ್ತರಿಸುತ್ತಾ ಬಾಪೂಜಿ ಗೃಹ ನಿರ್ಮಾಣ ಸಹಕಾರ ಸಂಘದ ಹಿಂದಿನ ಆಡಳಿತ ಮಂಡಳಿಯವರು ಹಿರಿಯ ಸದಸ್ಯರ ಜ್ಯೇಷ್ಠತೆಯನ್ನು ಕಡೆಗಣಿಸಿ, ಕಿರಿಯ ಸದಸ್ಯರಿಗೆ ಕಾನೂನು ಬಾಹಿರವಾಗಿ ಹಂಚಿಕೆ ಮಾಡಿದಂತಹ ಸುಮಾರು 160ಕ್ಕೂ ಹೆಚ್ಚು ನಿವೇಶನಗಳನ್ನು ಸಂಘದ ಹಾಲಿ ಆಡಳಿತ ಮಂಡಳಿಯವರು ರದ್ದುಗೊಳಿಸಿದ್ದು ಈ ರದ್ದತಿ ಕ್ರಮವನ್ನು ಪ್ರಶ್ನಿಸಿ ಒಟ್ಟು 114 ಪ್ರಕರಣಗಳಲ್ಲಿ ಬಾಧಿತರಾದವರು ಸಹಕಾರ ಸಂಘಗಳ ಉಪ ನಿಬಂಧಕರು-2, ಬೆಂಗಳೂರು ನಗರ ಜಿಲ್ಲೆ ರವರ ನ್ಯಾಯಾಲಯದಲ್ಲಿ ಹೂಡಿರುವ ದಾವೆಗಳನ್ನು 3 ತಿಂಗಳೊಳಗೆ ಇತ್ಯರ್ಥ ಪಡಿಸುವುದಾಗಿ ಆಶ್ವಾಸನೆ ನೀಡಿರುತ್ತಾರೆ.

ಇ) ಹಾಗಿದ್ದಲ್ಲಿ ಈ ಸಂಘದ ಅವ್ಯವಹಾರದ ತನಿಖೆ ಮುಗಿದಿದೆಯೇ? ತಪ್ಪಿತಸ್ಥರಿಗೆ ಆಗಿರುವ ಶಿಕ್ಷೆಯ ಸ್ವರೂಪವೇನು? ಆಗಿರುವ ಶಿಕ್ಷೆಯ ಸ್ವರೂಪವೇನು?

ಸಂಘದಲ್ಲಿ ನಡೆದಿರುವ ಹಣ ದುರುಪಯೋಗ ಮತ್ತು ಇತರೆ ಅವ್ಯವಹಾರಗಳ ಬಗ್ಗೆ ಶಾಸನಬದ್ಧ ವಿಚಾರಣೆಗಳನ್ನು ನಡೆಸಲಾಗುತ್ತದೆ. ಆರೋಪಗಳು ಸಾಬೀತಾಗಿರುತ್ತವೆ. ತಪ್ಪಿತಸ್ಥರ ವಿರುದ್ಧ ಕ್ರಿಮಿನಲ್ ಮೊಕದ್ದಮೆ ಸಂಖ್ಯೆ: 11960/2005 ಅನ್ನು ದಾಖಲಿಸಲಾಗಿದೆ. ಈ ಮೊಕದ್ದಮೆಯಲ್ಲಿ ತಪ್ಪಿತಸ್ಥರು ಸೆರೆವಾಸ ಅನುಭವಿಸಿ ನಂತರದಲ್ಲಿ ಜಾಮೀನಿನ ಮೇಲೆ ಬಿಡುಗಡೆ ಹೊಂದಿರುತ್ತಾರೆ. ಇವರ ವಿರುದ್ಧ ಹೂಡಿರುವ ಕ್ರಿಮಿನಲ್ ಮೊಕದ್ದಮೆಯ ಮುಂದಿನ ವಿಚಾರಣೆಯು ಪ್ರಗತಿಯಲ್ಲಿರುತ್ತದೆ.

ಈ) ಹಾಗಿಲ್ಲದಿದ್ದಲ್ಲಿ, ಈ ತನಿಖೆಯು ಯಾವ ಹಂತದಲ್ಲಿದೆ? ತನಿಖೆ ನಡೆಸುವುದಕ್ಕೆ ಸರ್ಕಾರ ನೇಮಿಸಿರುವ ತನಿಖಾಧಿಕಾರಿಗಳ ವಿವರ ನೀಡುವುದು?

ತಪ್ಪಿತಸ್ಥರ ವಿರುದ್ಧ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 69ರಡಿ ಸಿಎಲ್ ಕ್ರಮವನ್ನು ಸಹ ತೆಗೆದುಕೊಳ್ಳಲಾಗಿರುತ್ತದೆ. ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 103ರ ಅಡಿಯಲ್ಲಿ ತಪ್ಪಿತಸ್ಥರ ಹೆಸರಿನಲ್ಲಿರುವ ಸುಮಾರು ರೂ.6.00 ಕೋಟಿಗೂ ಮೇಲ್ಪಟ್ಟ ಸ್ಥಿರಾಸ್ತಿಗಳನ್ನು ಜಪ್ತಿ ಆದೇಶ ಹೊರಡಿಸಿ ಮುಟ್ಟುಗೋಲು ಹಾಕಿಕೊಳ್ಳಲಾಗಿದೆ.

ಹಾಲಿ ಆಡಳಿತ ಮಂಡಳಿಯವರು ನಿವೇಶನಗಳ ಹಂಚಿಕೆ ರದ್ದುಪಡಿಸಿದ ಹಿನ್ನಲೆಯಲ್ಲಿ ಬಾಧಿತರಾದವರು ಸಹಕಾರ ಸಂಘಗಳ ಉಪ ನಿಬಂಧಕರು-2, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಇವರಲ್ಲಿ ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ 1959ರ ಪ್ರಕರಣ 70ರ ಅಡಿಯಲ್ಲಿ ಒಟ್ಟು 184 ದಾವೆಗಳನ್ನು

ದಾಖಲಿಸಿದ್ದು ಅವುಗಳನ್ನು ಶೀಘ್ರ ಇತ್ಯರ್ಥಕ್ಕಾಗಿ ಇಲಾಖೆಯ ಹಿರಿಯ ಅಧಿಕಾರಿಗಳಿಗೆ ವಹಿಸಲಾಗಿದೆ.

1. ಸಹಕಾರ ಸಂಘಗಳ ಜಂಟಿ ನಿಬಂಧಕರು, ನಿಯಮ 441, ಅಮಾನತ್ ಕೋ.ಆಪರೇಟಿವ್ ಬ್ಯಾಂಕ್ ನಿ. ಬೆಂಗಳೂರು ಇವರಿಗೆ 135 ದಾವಾ ಪ್ರಕರಣಗಳನ್ನು ಇತ್ಯರ್ಥಕ್ಕಾಗಿ ವಹಿಸಿಕೊಡಲಾಗಿದ್ದು ಈ ಪೈಕಿ 20 ದಾವೆಗಳಲ್ಲಿ ವಾದಿಗಳೇ ಮತ್ತೊಂದು ದಾವೆಗಳಲ್ಲಿ ಪ್ರತಿವಾದಿಗಳು ಆಗಿರುವುದರಿಂದ ಸಿಂಧುತ್ವ ಇಲ್ಲವೆಂದು ಪರಿಗಣಿಸಿ ವಿಲೇಗೊಳಿಸಿರುತ್ತಾರೆ. ಉಳಿದ 115 ದಾವೆಗಳು ಸದರಿ ನ್ಯಾಯಾಲಯದಲ್ಲಿ ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತವೆ.
2. ತರುವಾಯ ದಾಖಲಾದ 49 ವ್ಯಾಜ್ಯಗಳನ್ನು ಸಮಾಪಕ ಹಾಗೂ ಸಹಕಾರ ಸಂಘಗಳ ಜಂಟಿ ನಿಬಂಧಕರು, ನಿಯಮ 441, ಕಂಟ್ರಾಕ್ಟರ್ಸ್ ಕೋ-ಆಪರೇಟಿವ್ ಬ್ಯಾಂಕ್ ನಿ., ಬೆಂಗಳೂರು ಇವರಿಗೆ ಇತ್ಯರ್ಥಕ್ಕಾಗಿ ವಹಿಸಿಕೊಡಲಾಗಿರುತ್ತದೆ. ಸದರಿ ಪ್ರಕರಣಗಳು ವಿವಿಧ ಹಂತಗಳಲ್ಲಿ ಪ್ರಗತಿಯಲ್ಲಿರುತ್ತವೆ.

ಸಂಖ್ಯೆ: ಸಿಒ 11 ಸಿಹೆಚ್ಎಸ್ 2009

ಸಹಿ/-
(ಲಕ್ಷ್ಮಣ ಸ. ಸವದಿ)
ಸಹಕಾರ ಸಚಿವರು

(ಆರ್.ಎಸ್.ಹುಚ್ಚಾಚಾರಿ)
ವಿಶೇಷ ಕರ್ತವ್ಯಾಧಿಕಾರಿ ಹಾಗೂ
ಪದನಿಮಿತ್ತ ಸರ್ಕಾರದ ಜಂಟಿ ಕಾರ್ಯದರ್ಶಿ,
ಸಹಕಾರ ಇಲಾಖೆ.

ಕರ್ನಾಟಕ ವಿಧಾನ ಸಭೆ

139 ಶ್ರೀ.ಸುರೇಶಗೌಡ,
ಕೃಷಿ ಸಚಿವರು

ಅ) ನಾಗಮಂಗಲ ತಾಲ್ಲೂಕಿನ ಸಣ್ಣ ಹಿಡುವಳಿ ರೈತ ಕುಟುಂಬದವರಿಗೆ ಪ್ರಸಕ್ತ ಸಾಲಿನಲ್ಲಿ ನೀಡಲಾಗುತ್ತಿರುವ ಸಾವಿರ ರೂಪಾಯಿಗಳ ಸಹಾಯ ಧನಕ್ಕೆ ಗುರುತಿಸಲಾಗಿರುವ ರೈತರೆಷ್ಟು;

21030 ಸಣ್ಣ ಮತ್ತು ಅತಿ ಸಣ್ಣ ರೈತ ಕುಟುಂಬಗಳನ್ನು ಗುರುತಿಸಲಾಗಿದೆ.

21030 Small & Marginal Farmers have been identified.